# ಆಡಿದ ರಂಗನಾಡಿದ ರೂಢಿಯೊಳಗೆ ನಮ್ಮ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 41.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 132.
3. **Note:** Lyrics given here are as per Ref. 1. The wordings in Ref. 2 are same as in Ref. 1.
4. **Note:** Singer has followed these lyrics.

ರಾಗ: ಭೂರಿ ಕಲ್ಯಾಣಿ        ತಾಳ: ಛಾಪು

ಆಡಿದ ರಂಗನಾಡಿದ     || ಪ ||
ರೂಢಿಯೊಳಗೆ ನಮ್ಮ ಮಕ್ಕಳಂತೆ     || ಅಪ ||

ಮಣ್ಣಾಟ ಬೇಡವೊ ಬುಕ್ಕುಚಿಕ್ಕಿ ಮಾಡಬೇಕು
ಅಣ್ಣಯ್ಯ ಬಾರೆಂದು ಎತ್ತಿಕೊಂಡು
ಎಣ್ಣೆ ಒತ್ತಿ ಬೇಗ ಎರೆದಳು ಗೋಪ್ಯಮ್ಮ
ಕಣ್ಣಿಗೆ ಕಾಡಿಗೆ ಇಟ್ಟಳು ಕೇಳಯ್ಯ     || 1 ||

ತಿಲಕವು ಫಣೆಯಲಿ ಸರಿಗೆ ಕೊರಳು
ಥಳಥಳಿಸುವ ಕರ್ಣಭೂಷಣ ಉಡಿದಾರ
ಹೊಳೆವ ಪೀತಾಂಬರ ಹೆಗಲಿಂದ ಒಲಿವುದು
ಜಲಜನಾಭನಿಗೆ ಕಡಗ ಕಾಲ ಸರಗಳು     || 2 ||

ಮೂರು ವರುಷಗಳು ಮುದ್ದು ರಂಗಯ್ಯಗೆ
ಮೀರಿದ ಕೆಂದುಟಿ ಜೊಲ್ಲು ಬಾಯಿ
ವಾರಿಗೆಯ ಮಕ್ಕಳ ಕೂಡ ಬೀದಿಯಲಿ
ವಾರಿಜನಾಭನು ನಲಿಯುತಲಿರ್ದ     || 3 ||

ಚೆಂಡು ಬುಗುರಿ ಮತ್ತು ಕಣ್ಣುಮುಚ್ಚಿ ಕೋಲು

ಗಂಡು ಮಕ್ಕಳ ಸಹ ಗಜುಗದಾಟ
ಕಂಡವರ ಮನವನು ಅಪಹರಿಸುತಲಿ
ದಂಡ ಪ್ರಣಾಮಗೊಂಬ ವಿರಿಂಚಾದಿಗಳಿಂದ || 4 ||

ಮಣ್ಣನೆತ್ತಿ ತನ್ನ ತಲೆಗೆ ತಿಕ್ಕಿದನು
ಮಣ್ಣಾಯಿತು ಮೈಯು ಪೀತಾಂಬರವು
ಮಣ್ಣ ಗಂಟು ಕಟ್ಟಿ ಉಪ್ಪು ಕೂಗಿದನು
ಮಣ್ಣ ಪಡೆದ ತಂದೆ ಪುರಂದರ ವಿಠಲ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಬುಕ್ಕಚ್ಚ** – ಸ್ನಾನ, ಮಕ್ಕಳಭಾಷೆ.

**ವಿರಿಂಚಾದಿಗಳಿಂದ** – ಬ್ರಹ್ಮನೇ ಮೊದಲಾದವರಿಂದ.

**ಮಣ್ಣ ಪಡೆದ** – ಭೂಮಿಯನ್ನು ಬಲಿಯಿಂದ ದಾನವಾಗಿ ಪಡೆದುಕೊಂಡ.

**Classification:** Keerthane
**Ankita:** tande purandara vittala
**Location:** NA
**Category:** Krishna Stuti,
**Sub-Category:** krishana, ranga, ADu, gopi, kannu, abharana, bayi, makkalu, mana,
**Pravachana:** NA
**Explanation:** NA